# ನಿನ್ನ ಕಣ್ಣಿನ ಕಾಡಿಗೆಗೇ ತಂದದ್ದು


ಕಲೆ: ನಾಗೇಶ ಹೆಗಡೆ

ಅಕ್ಕಿ ಎರಚುವುದಷ್ಟೇ ಗೊತ್ತು
ಈ ಅಂಗಳಕೆ ಬರುವ ಹಕ್ಕಿಗಳ
ಲೆಕ್ಕವಿಟ್ಟಿಲ್ಲ ನಾನು.
ಹಟ ಹಿಡಿವ ಹಕ್ಕಿಗಳು ಕುಪ್ಪಳಿಸಿ
ಹತ್ತಿರ ಹತ್ತಿರ
ಬರುವುದ ನೋಡಲೆಂದೇ
ಕಾಳು ನೀಡುವುದ ನಿಲ್ಲಿಸುವೆ ಬಿಡುವಿನಲಿ
ಒಮ್ಮೊಮ್ಮೆ.

ಕಡುಮೌನದ ಎರಡಂಕಣ ದಾಟಿ
ಮೆಟ್ಟಿಲಿಗೆ
ಬಂದಾಗಲೆಲ್ಲಾ ಪುಟ್ಟ ಕಣ್ಣಿನ ಅಕ್ಕರೆ
ನನ್ನ ಕಟ್ಟಿಹಾಕುತ್ತದೆ.
ಮುಕ್ಕಾಗದ ನನ್ನ ಮುಗುಳುನಗುವಿಗೆ
ಹಕ್ಕಿಗಾತೆಯ ಕಾರಣ ಕೇಳಿ ಹುಚ್ಚು
ಎಂದು ನಕ್ಕಾರು ಮಂದಿ ಎಂಬ ಅಳುಕು
ನನಗೆ ಎಂದಿನಂತೆ.

ಮುಂಗೈ ಮೇಲೆ ಕುಳಿತು ಮುಖ
ನೋಡುವ,
ಪ್ರೀತಿ ಜೋಳಿಗೆಯೊಳಗೆ ಇಣುಕಿ
ನೋವು ಹೆಕ್ಕುವ
ಆಸೆಯಿದೆಯಂತೆ ರೆಕ್ಕೆಯಿರುವ
ಈ ಪುಟ್ಟ ಚುಕ್ಕಿಗಳಿಗೆ.
ನಿನ್ನ ಕಣ್ಣಿನ ಕಾಡಿಗೆಗೇ ತಂದದ್ದು
ಎನ್ನುತ್ತಾ ಕತ್ತಿನ
ಸುತ್ತದ ಕಪ್ಪು ತೋರುತ್ತದೆ ಅಲ್ಲೊಂದು.

ಮರಿಹಕ್ಕಿ ತನ್ನ ಕೊಕ್ಕು ತೆಗೆದು ಅಂಗುಳ
ತೋರಿಸಿದಾಗೆಲ್ಲ
ಅಮ್ಮಾ ತುತ್ತು ಎಂದ ಹಾಗಾಗುತ್ತದೆ.
ಒಳಕೋಣೆಯಲಿ ಒರಟು ಧ್ವನಿಯೇರಿ
ಉಪ್ಪು ನೀರು ಹರಿವಾಗಲೆಲ್ಲಾ
ಹೊರಗೋಡೆಗೆ ಹಾರಿಬರುತ್ತವೆ
ದಂಡು ದಂಡು,
ಬಂದೂಕು ಹಿಡಿದ ಭಾರಿ ಸೈನಿಕರಂತೆ.

ಪ್ರೀತಿ ಜೋಳಿಗೆ ಖಾಲಿಯಾಗುತ್ತಲೇ
ಇಲ್ಲ ಇಲ್ಲಿ
ಕೊಟ್ಟು ತುಂಬಿಸುವುದಕೆ
ಈ ಪುಟ್ಟ ದೇವರುಗಳ
ನಡುವೆ ಏನಂಥ ಪೈಪೋಟಿ.
ಮಾತು ತಿಳಿಯದ ಹಕ್ಕಿಗಳು
ಭಾಷೆ ಕೇಳುತ್ತವೆ
ಆಗಾಗ ನನ್ನ;
“ಇಲ್ಲ... ಮತ್ತೆಂದೂ ಬಿಕ್ಕುವುದಿಲ್ಲ!...”

● **ನಂದಿನಿ ಹೆದ್ದುರ್ಗ**